## ಕರ್ನಾಟಕ ಸರ್ಕಾರ

## ತಹಶೀಲ್ದಾರರು, ಸಿರುಗುಪ್ಪ ಇವರ ನ್ಯಾಯಾಲಯ, ಸಿರುಗುಪ್ಪ.

ಸಂ.ಕಂ/ಹಬ/ವಿವಾದ/59/2015-16 ದಿ:14-09-2016

| ವಾದಿಗಳು | ಪ್ರತಿವಾದಿಗಳು |
|---|---|
| ಶಿವಮೂರ್ತಿ ತಂದೆ ಸಿದ್ದೇಶಪ್ಪ<br>ಅಮರಾಪುರ ಗ್ರಾಮ. ಸಿಂಧನೂರು ತಾಲೂಕು<br>ರಾಯಚೂರು ಜಿಲ್ಲೆ. | 1..ಸೋಮಣ್ಣ ತಂದೆ ಲೇಟ್ ರಾಮಚಂದ್ರಪ್ಪ<br>2.ಅಶ್ವತ್ಥಾಮ ತಂದೆ ಲೇಟ್ ರಾಮಚಂದ್ರಪ್ಪ<br>3.ಮಲ್ಲೇಶಪ್ಪ ತಂದೆ ಲೇಟ್ ಸಹದೇವಪ್ಪ.<br>4.ವೆಂಕಟಲಕ್ಷ್ಮಮ್ಮ ಗಂಡ ಲೇಟ್ ಕೃಷ್ಣಪ್ಪ<br>ಅಗಸನೂರು ಗ್ರಾಮ. ಸಿರುಗುಪ್ಪ ತಾಲೂಕು. |

ದಾವಾ ಜಮೀನಿನ ವಿವರ

| ತಾಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ | ತರಹೆ |
|---|---|---|---|---|
| ಸಿರುಗುಪ್ಪ | ಅಗಸನೂರು | 71/ಎ/1 | 2-29 | ಖುಷ್ಕಿ |

ಪೀಠಿಕೆ;-

ಸಿರುಗುಪ್ಪ ತಾಲೂಕು ಅಗಸನೂರು ಗ್ರಾಮದ ಸ,ನಂ.71/ಎ/1, ವಿ:2-29 ಎಕ್ರೆ ಜಮೀನು ಹಾಲಿ ಪಹಣಿ ದಾಖಲೆ ಪ್ರಕಾರ ಕುರುಬರ ಸಹದೇವಪ್ಪ ತಂದೆ ಈರಣ್ಣ ಹೆಸರಿಗೆ ಪಟ್ಟಾ ಇದ್ದು, ಸದ್ರಿಯವರು ದಿನಾಂಕ:01-06-1965 ರಂದು ಮರಣ ಹೊಂದಿರುತ್ತಾರೆಂದು, ಮೃತರ ವಾರಸುದಾರರು ದಿ:08-09-2015 ರಂದು ಮಾಡಿಕೊಂಡ ಲಿಖಿತ ಒಪ್ಪಿಗೆ ಪತ್ರದ ಪ್ರಕಾರ 1. **ಸೋಮಣ್ಣ ತಂದೆ ಲೇಟ್ ರಾಮಚಂದ್ರಪ್ಪ 2. ಅಶ್ವತ್ಥಾಮ ತಂದೆ ಲೇಟ್ ರಾಮಚಂದ್ರಪ್ಪ 3. ಮಲ್ಲೇಶಪ್ಪ ತಂದೆ ಲೇಟ್ ಸಹದೇವಪ್ಪ, 4. ವೆಂಕಟಲಕ್ಷ್ಮಮ್ಮ ಗಂಡ ಲೇಟ್ ಕೃಷ್ಣಪ್ಪ** ಇವರು ತಮ್ಮಗಳ ಹೆಸರಿಗೆ ಜಂಟಿಯಾಗಿ ಪೋತಿವಾರಸು ಮೇರೆಗೆ ಪಟ್ಟಾ ಬದಲಾವಣೆ ಮಾಡಲು ಕೋರಿ ಸಲ್ಲಿಸಿದ ಅರ್ಜಿ ಮೇರೆಗೆ, ಅದರಂತೆ ಕ್ರಮ ಜರುಗಿಸಲು ತಾಲೂಕು ಕಛೇರಿ ಭೂಮಿ ಗಣಕೀಕರಣ ಶಾಖೆಯಿಂದ ಕಂದಾಯ ನಿರೀಕ್ಷಕರು ಹಚ್ಚೊಳ್ಳಿ ಇವರಿಗೆ ಚೆಕ್‌ಲಿಸ್ಟ್‌ನ್ನು ಕಳುಹಿಸಲಾಗಿ ಕರ್ನಾಟಕ ಭೂ-ಕಂದಾಯ ನಿಯಮಗಳು 1966 ರ ನಿಯಮ 65 ರಂತೆ ನಮೂನೆ 21 ರ ನೋಟೀಸನ್ನು ಗ್ರಾ,ಲೆ. ಅಗಸನೂರು ಇವರು ಗ್ರಾಮದಲ್ಲಿ ಪ್ರಚುರ ಪಡಿಸಿರುತ್ತಾರೆ. ಅರ್ಜಿದಾರರ ಹೆಸರಿಗೆ ಹಕ್ಕು ಬದಲಾವಣೆ ಮಾಡುವ ನಿಗದಿತ ಅವಧಿಗೆ ಮುಂಚೆ **ಶಿವಮೂರ್ತಿ ತಂದೆ ಸಿದ್ದೇಶಪ್ಪ** ಎಂಬುವವರು "ಪ್ರಸ್ತಾಪಿತ ಜಮೀನಿನಲ್ಲಿ ತಮಗೂ ಸಹ ಭಾಗ ಇರುತ್ತದೆಂದು, ಅರ್ಜಿದಾರರ ಹೆಸರಿಗೆ ಪಟ್ಟಾ ಬದಲಾವಣೆ ಮಾಡಬಾರದೆಂದು" ದಿನಾಂಕ:23-12-2015 ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ಕಂದಾಯ ನಿರೀಕ್ಷಕರು ಹಚ್ಚೊಳ್ಳಿ ಇವರು ಸದ್ರಿ ಪ್ರಕರಣವನ್ನು ವಿವಾದಾಸ್ಪದವೆಂದು ಪರಿಗಣಿಸಿ ಹ,ಬ. ಸಂಖ್ಯೆ:32/2015-16 ದಿನಾಂಕ: 23-12-2015 ರ ಪ್ರಕಾರ ಈ ನ್ಯಾಯಾಲಯಕ್ಕೆ ಕಡತವನ್ನು ಸಲ್ಲಿಸಿರುತ್ತಾರೆ.

ಸದ್ರಿ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ನೋಂದಾಯಿಸಿಕೊಂಡು ಕರ್ನಾಟಕ ಭೂ-ಕಂದಾಯ ನಿಯಮಗಳು 1966 ರ ನಿಯಮ 43 ಮತ್ತು 67 ರಂತೆ ಪ್ರಕರಣದಲ್ಲಿನ ವಾದಿ ಮತ್ತು ಪ್ರತಿವಾದಿಗಳಿಗೆ ನೋಟೀಸುಗಳನ್ನು ಜಾರಿ ಮಾಡಿ ಪ್ರಕರಣದ ವಿಚಾರಣೆಯನ್ನು ದಿ:28-03-2016 ರಿಂದ 16-05-2016 ರ ವರೆಗೆ ವಿಚಾರಣೆಗೆ ತೆಗೆದುಕೊಳ್ಳಲಾಯಿತು. ವಾದಿ, ಪ್ರತಿವಾದಿಗಳು ವಿಚಾರಣೆಗೆ ಹಾಜರಾಗಿರುತ್ತಾರೆ.

ಕರ್ನಾಟಕ ಸರ್ಕಾರ ಸಿರುಗುಪ್ಪ ತಹಶೀಲ್ದಾರರ ನ್ಯಾಯಾಲಯ

ಸದ್ರಿ ಪ್ರಕರಣದಲ್ಲಿ ದಾಖಲೆ ಪರಿಶೀಲಿಸಿ ವಾದಿ, ಪ್ರತಿವಾದಿಗಳ ವಾದ ಆಲಿಸಲಾಯಿತು. ವಾದಿಯು ತಕರಾರು ಅರ್ಜಿ ಪ್ರಕಾರ "ದಾವಾ ಜಮೀನು ಪಿತ್ರಾರ್ಜಿತ ಆಸ್ತಿಯಾಗಿದ್ದು, ಸದ್ರಿ ಜಮೀನಿನಲ್ಲಿ ತಮಗೂ ಸಹ ಭಾಗ ಇರುತ್ತದೆಂದು ಅರ್ಜಿದಾರರ ಹೆಸರಿಗೆ ಹಕ್ಕು ಬದಲಾವಣೆ ಮಾಡಬಾರದೆಂದು ಕೋರಿದ್ದು, ವಿಚಾರಣೆ ನಡೆಯುವ ಸಮಯದಲ್ಲಿ ದಿನಾಂಕ:03-05-2016 ರಂದು ನೋಟರಿ ಸಮಕ್ಷಮ ಪ್ರಮಾಣೀಕರಿಸಿದ ಅಫಿಡವಿಟ್ ಸಲ್ಲಿಸಿ "ದಾವಾ ಜಮೀನಿನ ವಿಷಯವಾಗಿ ತಾವುಗಳು ಗ್ರಾಮದ ಹಿರಿಯರ ಸಮಕ್ಷಮದಲ್ಲಿ ರಾಜೀಯಾಗಿ ಸಮಸ್ಯೆಯನ್ನು ಬಗೆಹರಿಸಿಕೊಂಡಿದ್ದು, ತಾನು ನೀಡಿದ ತಕರಾರು ಅರ್ಜಿಯನ್ನು ಹಿಂಪಡೆದಿದ್ದು, ಅರ್ಜಿದಾರರ ಹೆಸರಿಗೆ ಪಟ್ಟಾ ಬದಲಾವಣೆ ಮಾಡಲು ತನ್ನ ಯಾವುದೇ ರೀತಿಯ ಆಕ್ಷೇಪಣೆಗಳು ಇರುವುದಿಲ್ಲ" ಎಂದು ಹೇಳಿಕೆ ನೀಡಿರುತ್ತಾರೆ.

ಆದ್ದರಿಂದ ಸಿರುಗುಪ್ಪ ತಾಲೂಕು ಅಗಸನೂರು ಗ್ರಾಮದ ಸ,ನಂ.71/ಎ/1, ವಿ:2-29 ಎಕ್ರೆ ಜಮೀನನ್ನು ಅರ್ಜಿದಾರರ ಹೆಸರಿಗೆ ಪೋತಿವಾರಸು ಮೇರೆಗೆ ಜಂಟಿಯಾಗಿ ಹಕ್ಕುಬದಲಾವಣೆ ಮಾಡಲು ಈ ಕೆಳಕಂಡಂತೆ-

**ಸಂ.ಕಂ/ಹಬ/ವಿವಾದ/59/2015-16** **ದಿ:14-09-2016**

**ಆದೇಶ**

ಪೀಠಿಕೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆ, ವಾಸ್ತವಾಂಶ ಹಾಗೂ ದಾಖಲೆಗಳನ್ವಯ ಸಿರುಗುಪ್ಪ ತಾಲೂಕು ಅಗಸನೂರು ಗ್ರಾಮದ ಸ,ನಂ.71/ಎ/1, ವಿ:2-29 ಎಕ್ರೆ ಜಮೀನು ಹಾಲಿ ಪಹಣಿ ದಾಖಲೆ ಪ್ರಕಾರ ಸಹದೇವಪ್ಪ ತಂದೆ ಈರಣ್ಣ ಹೆಸರಿಗೆ ಪಟ್ಟಾ ಇದ್ದು, ಸದ್ರಿಯವರು ದಿನಾಂಕ:01-06-1965 ರಂದು ಮರಣ ಹೊಂದಿದ್ದು, ಮೃತರ ವಾರಸುದಾರರು ದಿ:08-09-2015 ರಂದು ಮಾಡಿಕೊಂಡ ಲಿಖಿತ ಒಪ್ಪಿಗೆ ಪತ್ರದ ಪ್ರಕಾರ 1. **ಸೋಮಣ್ಣ ತಂದೆ ಲೇಟ್ ರಾಮಚಂದ್ರಪ್ಪ 2. ಅಶ್ವತ್ಥಾಮ ತಂದೆ ಲೇಟ್ ರಾಮಚಂದ್ರಪ್ಪ 3. ಮಲ್ಲೇಶಪ್ಪ ತಂದೆ ಲೇಟ್ ಸಹದೇವಪ್ಪ, 4. ವೆಂಕಟಲಕ್ಷ್ಮಮ್ಮ ಗಂಡ ಲೇಟ್ ಕೃಷ್ಣಪ್ಪ** ಇವರ ಹೆಸರಿಗೆ ಪೋತಿವಾರಸು ಮೇರೆಗೆ ಜಂಟಿಯಾಗಿ ಪಟ್ಟಾ ಬದಲಾವಣೆ ಮಾಡಲು ಆದೇಶಿಸಿದೆ.

ಈ ಆದೇಶ ಹೇಳಿ ಬರೆಯಿಸಿ, ಬೆರಳಚ್ಚು ಮಾಡಿ, ತಪ್ಪುಗಳನ್ನು ತಿದ್ದಿ ದಿ:14-09-2016 ರಂದು ತೆರೆದ ನ್ಯಾಯಾಲಯದಲ್ಲಿ ಬಹಿರಂಗವಾಗಿ ಘೋಷಿಸಿದೆ.

ತಹಶೀಲ್ದಾರರು,ಸಿರುಗುಪ್ಪ

ಕರ್ನಾಟಕ ಸರ್ಕಾರ ಸಿರುಗುಪ್ಪ ತಹಶೀಲ್ದಾರರ ನ್ಯಾಯಾಲಯ

ಗೆ,

1.ಭೂಮಿ ಗಣಕೀಕರಣ ಶಾಖೆಗೆ ಸೂಕ್ತ ಕ್ರಮಕ್ಕಾಗಿ
2.ವಾದಿ-ಪ್ರತಿವಾದಿಗಳಿಗೆ
3.ಕಛೇರಿ ಕಡತಕ್ಕೆ